# 'ಸಂಸ್ಕೃತಿ' ಮತ್ತು 'ಪುನರ್‌ಮೌಲ್ಯೀಕರಣ' ಪರಿಕಲ್ಪನೆಗಳ ವಿವೇಚನೆ

**ಡಾ. ಹೇಮಲತ ಪಿ. ಎನ್.**
ಇ/ಮ ಶ್ರೀ ನಾಗರಾಜು ಪಿ. ಎಚ್.
ನಂ.1156, 4/10ನೇ ಮುಖ್ಯರಸ್ತೆ
ಇ ಮತ್ತು ಎಫ್ ಬ್ಲಾಕ್, 2ನೇ ಹಂತ
ರಾಮಕೃಷ್ಣನಗರ, ಮೈಸೂರು–570022
hemubheemu@gmail.com

ಸಂಸ್ಕೃತಿ ಎಂಬುದು ಮನುಷ್ಯನು ತನ್ನ ಜೀವನಕ್ಕಾಗಿ, ಲೋಕಕ್ಕಾಗಿ ನಿರ್ದೇಶಸಿಕೊಂಡ ರೀತಿ–ನೀತಿಗಳ ಸಂಹಿತೆಯಾಗಿದೆ. ಮನುಷ್ಯ ಬದುಕಿನ ನೀತಿಸಂಹಿತೆಯಾದ ಸಂಸ್ಕೃತಿಯು ಸ್ಥಾವರರೂಪಿ ಹಾಗೂ ಕ್ರೂರರೂಪಿ ಆಗಿರಬಾರದು. ಹಾಗೇನಾದರೂ ಆಗಿಬಿಟ್ಟರೆ ಅದನ್ನು ನಿರಂತರವಾಗಿ ಪುನರ್‌ಮೌಲ್ಯೀಕರಣಕ್ಕೆ ಒಳಪಡಿಸಬೇಕಾಗುತ್ತದೆ. ಅಂತಹ ಸಾಂಸ್ಕೃತಿಕ ಪುನರ್‌ಮೌಲ್ಯೀಕರಣವು ಪ್ರಕ್ರಿಯೆಗೊಂಡಿರುವುದಕ್ಕೆ ಸಂಸ್ಕೃತಿಯ ವಿಕಾಸದಲ್ಲೇ ಚಾರಿತ್ರಿಕವಾದ ಅನೇಕ ದಾಖಲೆಗಳಿವೆ. ಡಾರ್ವಿನ್‌ನ ವಿಕಾಸವಾದದ ಪ್ರಕಾರ–ಮಂಗನಿಂದ ಮನುಷ್ಯನಾಗಿ ಪರಿವರ್ತಿತನಾಗುತ್ತಾ ಹೋದ ಮಾನವ ಬದುಕಲು ತನ್ನ ಅಗತ್ಯತೆಗಳಿಗೆ ಅನುಗುಣವಾಗಿ ಹೇಗೆ ಬದುಕಬೇಕೆಂಬುದನ್ನು ಕಲಿಯುತ್ತ ಹೋದ. ಮೃಗದಂತೆ ಜೀವಿಸುತ್ತಿದ್ದವನು ಕ್ರಮೇಣ ತನ್ನ ಜೀವನ ಶೈಲಿಯನ್ನು ಬದಲಿಸಿಕೊಂಡ. ಏಕೆಂದರೆ ಪ್ರಾಣಿಗಳಲ್ಲೆ ಬುದ್ಧಿವಂತಿಕೆಯಿಂದ ಚಿಂತಿಸುವ ಶಕ್ತಿ ಮನುಷ್ಯನಿಗೆ ಮಾತ್ರ ದೊರೆತಿದ್ದು, ಆತನ ನಡೆ–ನುಡಿಗಳಲ್ಲಿ, ಆಚಾರ–ವಿಚಾರಗಳಲ್ಲಿ ಕ್ರಮಕ್ರಮವಾಗಿ ಸುಧಾರಣೆಗಳು ಬೆಳೆದುಕೊಂಡುಬಂದವು. ಯಾವ ಒಳ್ಳೆಯ ಬದುಕಿತ್ತೋ, ಒಳ್ಳೆಯ ಅಚರಣೆಯಿತ್ತೋ, ಒಳ್ಳೆಯ ರೀತಿ–ರಿವಾಜುಗಳಿದ್ದವೋ, ಯಾವ ಒಳ್ಳೆಯ ಸುಸಂಸ್ಕೃತವಾದ ಯೋಚನೆಯಿತ್ತೋ–ಅದೆಲ್ಲವೂ ಸಂಸ್ಕೃತಿಯೆಂಬ ಹೆಸರಿನಲ್ಲಿ ಗುರುತಿಸಿಕೊಂಡಿತು. ಅಂದರೆ ಸಮ್ಯಕ್ ಕೃತಿ–ಸಂಸ್ಕರಿಸಲ್ಪಟ್ಟ ಅಥವಾ ಉತ್ತಮ ಕರ್ಮಗಳೆಲ್ಲವೂ ಸಂಸ್ಕೃತಿಯ ವ್ಯಾಪ್ತಿಯಲ್ಲೇ ಬರುತ್ತವೆ. ಈ ಹಿನ್ನೆಲೆಯಲ್ಲಿ ಸಂಸ್ಕೃತಿಯ ಅರ್ಥವೂ ವ್ಯಾಪಕವಾದದ್ದೇ. ಪರಂಪರಾಗತವಾಗಿರುವ ಆಚರಣೆ, ವಿಶೇಷವಾಗಿ ಸಭ್ಯತೆಯಿಂದ ಕೂಡಿದ ಎಲ್ಲವೂ ಸಂಸ್ಕೃತಿಯೆನಿಸಿಕೊಳ್ಳುತ್ತದೆ. ಇಂತ ಸಂಸ್ಕೃತಿಯು ದೇಶ, ಭಾಷೆ, ಜನಾಂಗಗಳಿಗುಣವಾಗಿ ಬದಲಾಗುವುದೂ ಸಹಜವೇ. ಹಾಗಾಗಿ ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿರುವ, ಭವ್ಯ ಇತಿಹಾಸ ಮತ್ತು ಪರಂಪರೆಯನ್ನು ನಮ್ಮ ಭಾರತದಲ್ಲಿಯೇ ಹಲವು ಸಂಸ್ಕೃತಿಗಳನ್ನು ಕಾಣುವುದು. ಭಾರತೀಯ ಸಂಸ್ಕೃತಿ ಪರಂಪರೆಯಲ್ಲಿ ಪುನರ್‌ಮೌಲ್ಯೀಕರಣ ಪ್ರಕ್ರಿಯೆ ನಿರಂತರವಾಗಿ ನಡೆದು ಬರುತ್ತಿದೆ. ಭಾರತ ಮಾತ್ರವಲ್ಲದೆ

ವಿಶ್ವದಾದ್ಯಂತ ಪ್ರತಿಯೊಂದು ಸಂಸ್ಕೃತಿಯು ಕಾಲ, ದೇಶ, ಕ್ರಿಯೆ ಮೊದಲಾದವುಗಳ ಒತ್ತಾಸೆಗಳಿಂದ ನಿರಂತರವಾಗಿ ಪುನರ್‌ಮೌಲ್ಯೀಕರಣಕ್ಕೆ ಒಳಗಾಗುತ್ತಲೇ ಇದೆ. ಹಾಗೆ ನೋಡಿದರೆ ಮಾನವ ಬದುಕಿನ ಪ್ರತಿಯೊಂದು ಹಂತವೂ ಪುನರ್‌ಮೌಲ್ಯೀಕರಣದ ಕಾರಣದಿಂದ ವಿಕಾಸಗೊಳ್ಳುತ್ತ, ಪಲ್ಲಟಗೊಳ್ಳುತ್ತ ಸಾಗಿಬಂದಿದೆಯೇ ಹೊರತು ನಿಶ್ಚಲವಾಗೇ ಉಳಿದುಕೊಂಡಿಲ್ಲ. ನೈಸರ್ಗಿಕವಾದ ವಿದ್ಯಮಾನಗಳು ಮತ್ತು ಮಾನವ ಜೀವದ ಮಾನಸಿಕ ಬೆಳವಣಿಗೆಗಳು ಸಾಂಸ್ಕೃತಿಕ ಪುನರ್‌ಮೌಲ್ಯೀಕರಣವನ್ನು ಮತ್ತೆ ಮತ್ತೆ ಒತ್ತಾಯಿಸುತ್ತ ಸಮಾಜ, ಸಂಸ್ಕೃತಿಗಳು ನಿಂತ ನೀರಾಗವು ಎಂಬುದನ್ನು ಸಾಧಿಸಿ ತೋರಿವೆ.

ಹಾಗಾದರೆ, ಪ್ರಾಕೃತಿಕ ಜಗತ್ತಿನ ವಿಕಾಸವೂ ಮಾನುಷಜೀವ ವಿಕಾಸವೂ ಸಾಂಸ್ಕೃತಿಕ ಚಲನಶೀಲತೆಯೂ ಸಾಧಿತಗೊಳ್ಳಬಲ್ಲ **'ಸಾಂಸ್ಕೃತಿಕ ಪುನರ್‌ಮೌಲ್ಯೀಕರಣ'** ಎಂದರೇನು?, ಅದು ಹೇಗೆ ಸಾಗುತ್ತದೆ? ಯಾಕೆ ಸಾಗುತ್ತದೆ?, ಎಲ್ಲಿ ಸಾಗುತ್ತದೆ? ಯಾರಿಂದ ಸಾಗುತ್ತದೆ? ಎಲ್ಲಿ ಆರಂಭಗೊಳ್ಳುತ್ತದೆ, ಎಲ್ಲಿ ಗುರಿ ಮುಟ್ಟುತ್ತದೆ? ಎಂಬ ಪ್ರಶ್ನೆಗಳನ್ನು ಮೊದಲು ಕೇಳಿಕೊಳ್ಳಬೇಕು. **'ಸಾಂಸ್ಕೃತಿಕ ಪುನರ್‌ಮೌಲ್ಯೀಕರಣ'** ಎಂಬ ಪರಿಕಲ್ಪನೆಯಲ್ಲಿರುವ ಎರಡೂ ಪದಗಳನ್ನು ಮೊದಲಿಗೆ ಬಿಡಿಯಾಗಿ ನಂತರ ಇಡಿಯಾಗಿ ಅರ್ಥೈಸಿಕೊಳ್ಳುವುದು ಸೂಕ್ತ.

೧. **ಸಂಸ್ಕೃತಿ>ಸಾಂಸ್ಕೃತಿಕ:** ಸಂಸ್ಕೃತಿಗೆ ಸಂಬಂಧಿಸಿದ ವರ್ತುಲವನ್ನು ಸಾಂಸ್ಕೃತಿಕ ಎನ್ನಲಾಗುತ್ತದೆ. ಯಾವುದೇ ಜನಸಮುದಾಯವೊಂದರ ಒಪ್ಪಿತ–ಅಪ್ಪಿತ ಜೀವನ ಕ್ರಮವೇ 'ಸಂಸ್ಕೃತಿ'. ಸಂಸ್ಕೃತಿಯನ್ನು ಕುರಿತು ಜಗತ್ತಿನಾದ್ಯಂತ ಹಲವಾರು ವಿದ್ವಾಂಸರು ಚಿಂತನೆ ನಡೆಸಿದ್ದಾರೆ. ಪ್ರಸಿದ್ಧ ಚಿಂತಕ **ಇ.ಬಿ.ಟೈಲರ್** ಹೇಳುವುದು, **"ಸಂಸ್ಕೃತಿ ಅಥವಾ ನಾಗರಿಕತೆಯನ್ನು ಅದರ ವಿಶಾಲ ಮಾನವಶಾಸ್ತ್ರೀಯ ಅರ್ಥದಲ್ಲಿ ತೆಗೆದುಕೊಂಡಾಗ, ಆ ಸಂಕೀರ್ಣ ಸಮಷ್ಠೀ ಜ್ಞಾನ, ನಂಬಿಕೆ, ಕಲೆ, ನೀತಿಗಳು, ಕಾನೂನು, ಸಂಪ್ರದಾಯಗಳು ಹಾಗೂ ಮನುಷ್ಯ ತನ್ನ ಸಮಾಜದ ಸದಸ್ಯನಾಗಿ ಗಳಿಸಿಕೊಂಡ ಸಮಸ್ತ ಸಾಮರ್ಥ್ಯಗಳು ಮತ್ತು ಅಭ್ಯಾಸಗಳನ್ನೆಲ್ಲ ಒಳಗೊಳ್ಳುತ್ತದೆ"**[1] ಎಂದು. ಹಾಗೆಯೇ ಕನ್ನಡದ ಹಿರಿಯ ವಿದ್ವಾಂಸರಾದ **ಡಿ.ವಿ.ಜಿ** ಅವರು, **"ಲೋಕದೊಡನೆ ನಮಗಾಗುವ ನಾನಾ ಸಂಪರ್ಕಗಳಲ್ಲಿ ನಾವು ಉಂಟಾಗಿಸುವ ಔಚಿತ್ಯವೇ ಸಂಸ್ಕೃತಿ"**[2] ಎನ್ನುತ್ತಾರೆ. ಹೀಗೆ ಸಂಸ್ಕೃತಿಯನ್ನು ಕುರಿತಾಗಿ ಅನೇಕ ವೈವಿಧ್ಯಮಯ ಗ್ರಹಿಕೆಗಳಿವೆ. ಅವೆಲ್ಲವುಗಳ ಒಟ್ಟು ಸಾರವೇನೆಂದರೆ, **ಯಾವುದೇ ಸಮುದಾಯವೊಂದರ ಬದುಕಿನ ನಡೆ–ನುಡಿಗಳ ಒಟ್ಟು ಮೊತ್ತವೇ ಸಂಸ್ಕೃತಿಯಾಗಿರುತ್ತದೆ.**

೨. **ಪುನರ್‌ಮೌಲ್ಯೀಕರಣ:** ಸರಿ–ತಪ್ಪು, ಒಪ್ಪಿಗೆ–ತಿರಸ್ಕಾರ, ಮೇಲು–ಕೀಳು, ಸ್ವಾತಂತ್ರ್ಯ–ಬಂಧನ, ಯಜಮಾನಿಕೆ–ಜೀತಗಾರಿಕೆ ಈ ಮೊದಲಾದ ಯಾವುದೇ ಭೇದಾಭೇದ ಸಂಗತಿಗಳನ್ನು ಮತ್ತೆಮೌಲ್ಯೀಕರಿಸುವ ಪ್ರಕ್ರಿಯೆಯನ್ನು

'ಪುನರ್‌ಮೌಲ್ಯೀಕರಣ' ಎಂದು ಕರೆಯಲಾಗುತ್ತದೆ. ಸಾಹಿತ್ಯ-ಸಂಸ್ಕೃತಿಯನ್ನು ಕುರಿತಾದ ಚರ್ಚೆ, ಸಂವಾದ, ಸಂಶೋಧನೆಗಳಲ್ಲಿ 'ಪುನರ್‌ಮೌಲ್ಯೀಕರಣ'ಕ್ಕೆ ಪರ್ಯಾಯವಾಗಿ ಹಲವಾರು ಪದ-ಪರಿಕಲ್ಪನೆಗಳನ್ನು ಬಳಸಲಾಗುತ್ತಿದೆ. **'ಪುನರಾವಲೋಕನ', 'ಸಿಂಹಾವಲೋಕನ', 'ಮರು ಓದು', 'ಮರುಚಿಂತನೆ', 'ಮರುಅವಲೋಕನ', 'ಅನುಸಂಧಾನ', 'ಒಂದು ಅವಲೋಕನ' 'ಪುನರ್‌ಚಿಂತನೆ', 'ಪುನರ್‌ಮನನ', 'ಮುಖಾಮುಖಿ', 'ಹೊಸನೋಟ', 'ಹೊಸಗ್ರಹಿಕೆ', 'ನಿರ್ವಚನ', 'ಪರಿಶೀಲನೆ', 'ಪುನರ್‌ವಿಮರ್ಶೆ', 'ಪುನರ್‌ಪರಿಶೀಲನೆ', 'ಮರುದರ್ಶನ', 'ಪುನರ್‌ದರ್ಶನ', 'ಪರಾಮರ್ಶೆ', 'ಪ್ರತಿಕ್ರಿಯೆ', 'ಸಹಸ್ಪಂದನ', 'ಮರುಸ್ಪಂದನ' 'ಮರುಮೌಲ್ಯೀಕರಣ' 'ಮರುಶೋಧ', 'ಮರು ಅಧ್ಯಯನ', 'ಪುನರಾನ್ವೇಷಣ'** ಮೊದಲಾದ ಪರಿಕಲ್ಪನೆಗಳು ಸಾಹಿತ್ಯಕ, ಸಾಂಸ್ಥಿಕ ಹಾಗೂ ಸಾಂದರ್ಭಿಕ ನೆಲೆಗಳಿಗೆ ಸಂಬಂಧಿಸಿದಂತೆ ಭಿನ್ನಭಿನ್ನ ನಾಮಾಂಕಿತಗಳೊಂದಿಗೆ ಪ್ರಯೋಗಿಸಲ್ಪಡುತ್ತಿವೆ. ಈ ಎಲ್ಲವುಗಳ ಆಶಯವು ಒಂದೆ. ಈಗಾಗಲೇ ಅಸ್ತಿತ್ವದಲ್ಲಿರುವ ಯಾವುದಾದರೂ ವಸ್ತು, ಸಂಗತಿಯನ್ನು ಮತ್ತೆ ವಿಚಾರ-ವಿನಿಮಯ, ಸಂವಾದ-ನಿಕಷಕ್ಕೆ ಒಡ್ಡಿ ಮೌಲ್ಯೀಕರಿಸುವ ಒಂದು ಪ್ರಕ್ರಿಯೆಯೇ ಆಗಿದೆ.

**ಸಂಸ್ಕೃತಿ** ಮತ್ತು **'ಪುನರ್‌ಮೌಲ್ಯೀಕರಣ** ಈ ಎರಡೂ ಪದಗಳನ್ನು ಸಂಯೋಜಿಸುವ ಸಾಧ್ಯತೆಯನ್ನು ವರ್ತಮಾನದ ತಲ್ಲಣಗಳ ಒತ್ತಾಸೆಯಿಂದ ಏರ್ಪಡಿಸಿ ನೋಡಿದಾಗ, **'ಸಾಂಸ್ಕೃತಿಕ ಪುನರ್‌ಮೌಲ್ಯೀಕರಣ'ವು – ಸಾಂಸ್ಕೃತಿಕ ವ್ಯವಸ್ಥೆಯೊಂದರ ಪರಂಪರಾಗತ ಹಾಗೂ ವರ್ತಮಾನದ ನಡೆ-ನುಡಿಗಳನ್ನು ವಿವಿಧ ಕಾರಣಗಳಿಂದಾಗಿ ಮರುಮೌಲ್ಯಮಾಪನಕ್ಕೆ ಒಳಪಡಿಸುವ ಪ್ರಕ್ರಿಯೆಯಾಗುತ್ತದೆ.** 21ನೇ ಶತಮಾನದ ಬಹುದೊಡ್ಡ ಪ್ರಶ್ನೆಗಳಾದ ಕೌಟುಂಬಿಕ ನ್ಯಾಯ, ಸಾಮಾಜಿಕ ನ್ಯಾಯ, ಆರ್ಥಿಕ ನ್ಯಾಯ, ರಾಜಕೀಯ ನ್ಯಾಯ, ಶೈಕ್ಷಣಿಕ ನ್ಯಾಯಗಳಿಂದ ಈಗಾಗಲೇ ಕಟ್ಟಿಕೊಂಡಿದ್ದ, ಪಾಲಿಸುತ್ತಿದ್ದ ಸಾಂಸ್ಕೃತಿಕ ಚಹರೆಗಳನ್ನು ಮುಖಾಮುಖಿಯಾಗಿ ಮೌಲ್ಯೀಕರಿಸಲಾಯಿತು. **ಕಾಲಕಾಲಕ್ಕೆ ಮೂಡುತ್ತಿದ್ದ ಹೊಸ ಅರಿವು, ಹೊಸ ಶೋಧ, ಹೊಸ ಸಂಬಂಧ, ಹೊಸ ಸಂಪರ್ಕಗಳ ಕಾರಣಗಳಿಂದ ಸಾಂಸ್ಕೃತಿಕ ಪುನರ್‌ಮೌಲ್ಯೀಕರಣದ ಪ್ರಕ್ರಿಯೆ ತೀವ್ರವಾಗುತ್ತಾ ಹೋಗುತ್ತದೆ.** ಇಂದು ನಾವು 'ಸರ್ವರಿಗೂ ಸಮಬಾಳು: ಸರ್ವರಿಗೂ ಸಮಪಾಲು' ಎಂಬ ಮಹದಾಶಯದ ಸಂವಿಧಾನಾತ್ಮಕ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿದ್ದೇವೆ. ಆದಾಗ್ಯೂ ನ್ಯಾಯದ ಪ್ರಶ್ನೆಗಳು ಎದುರಾದಂತೆಲ್ಲ ಸಂವಿಧಾನವೂ ಸಹ ಪುನರ್‌ಮೌಲ್ಯೀಕರಣಕ್ಕೆ ಒಳಪಟ್ಟು ಈವರೆಗೆ ನೂರಕ್ಕೂ ಹೆಚ್ಚು **'ತಿದ್ದುಪಡಿ'**ಗಳನ್ನು ಸೇರ್ಪಡೆಗೊಳಿಸಿಕೊಂಡಿರುವುದನ್ನು ಕಾಣಬಹುದಾಗಿದೆ.

DOI: 10.59176

ಸಾಂಸ್ಕೃತಿಕ ಚಲನಶೀಲತೆಗೆ ಮಾರ್ಗವಾದ **ಪುನರ್‌ಮೌಲ್ಯೀಕರಣಕ್ಕೆ** ಸಂಬಂಧಿಸಿದಂತೆ ಕೆಲವು **ವಿಚಾರ–ವ್ಯಾಖ್ಯಾನ**ಗಳು ಈ ಮುಂದಿನಂತಿವೆ:

೧. ನಿರಂತರ ಸಂಪರ್ಕ, ಪರಸ್ಪರ ಸಂಸರ್ಗದ ಮೂಲಕ ಒಂದು ಸಾಮಾನ್ಯ ಸಂಸ್ಕೃತಿಯನ್ನು ಸೃಜಿಸಿದ ಈ ಎಲ್ಲ ಜನಾಂಗದವರು (ಆರ್ಯರು, ದ್ರಾವಿಡರು, ಮಂಗೋಲಿಯ ಮತ್ತು ಶಿಥಿಯನ್ನರು) ತಮ್ಮ ವಿಶಿಷ್ಟ ಸಂಸ್ಕೃತಿಗಳನ್ನು ಒಂದರೊಡನೊಂದು ಬೆಸೆದು ವಿಲೀನ ಗೊಳಿಸಿದರು. ಹಾಗಿದ್ದೂ ಇವರೆಲ್ಲರೂ ಸಂಪೂರ್ಣವಾಗಿ ಬೆರೆತು ಬೇರಿಲ್ಲದಂತಾಗಲಿಲ್ಲ ಎನ್ನುವುದನ್ನು ಒಪ್ಪಲೇಬೇಕು. ಯಾಕೆಂದರೆ ಹಲವು ಸಂಸ್ಕೃತಿಗಳ ಸಮ್ಮೇಳನದಿಂದ ಒಂದು ಹೊಸ ವಿಶಿಷ್ಟಸಂಸ್ಕೃತಿ ರೂಪುಗೊಂಡರೂ ಅವರವರ ಸಂಸ್ಕೃತಿ ಇನ್ನೂ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡಿರುವುದನ್ನು ಕಾಣಬಹುದು[3] **–ಡಾ. ಬಿ.ಆರ್. ಅಂಬೇಡ್ಕರ್**.

೨. ಸಂಸ್ಕೃತಿ ಅತಿಗಾಂಭೀರ್ಯದ ಸಣ್ಣ ಗುಂಪಿನ ಸಂಕುಚಿತ ಸ್ವತ್ತಾಗಿರುವ ದಿನಗಳು ಕಳೆದುಹೋದವು; ಈಗ ಎಲ್ಲವನ್ನೂ ಸಾಮಾನ್ಯ ಜನತೆಯ ದೃಷ್ಟಿಯಿಂದ ನೋಡಬೇಕಾಗಿದೆ. ಅವರ ಸಂಸ್ಕೃತಿಯು ಹಿಂದಿನ ಸಂಸ್ಕೃತಿ ಪರಂಪರೆಯ ವಿಕಾಸವಾಗಿ ಅವರ ಹೊಸ ಆಶೋತ್ತರಗಳನ್ನು ರಚನಾತ್ಮಕ ದೃಷ್ಟಿಯನ್ನು ಪ್ರತಿಬಿಂಬಿಸಬೇಕು[4]**– ಜವಾಹರಲಾಲ್ ನೆಹರೂ**.

೩. ಇತಿಹಾಸಕಾರನ ಕೆಲಸ ಗತಕಾಲವನ್ನು ಪ್ರೀತಿಸುವುದೂ ಅಲ್ಲ ಅಥವಾ ಅದರಿಂದ ಬಿಡುಗಡೆ ಹೊಂದುವುದೂ ಅಲ್ಲ. ಬದಲಾಗಿ ಅದನ್ನು ಅರ್ಥಮಾಡಿಕೊಂಡು ಮತ್ತು ಅದರ ಮೇಲೆ ಪ್ರಭುತ್ವ ಸಾಧಿಸಿಕೊಂಡು, ವರ್ತಮಾನವನ್ನು ಗ್ರಹಿಸಕೊಳ್ಳುವ ಸಾಧನವನ್ನಾಗಿ ಅದನ್ನು ಬಳಸಿಕೊಳ್ಳುವುದು. ವರ್ತಮಾನದ ಸಮಸ್ಯೆಗಳನ್ನು ಕುರಿತ ಒಳನೋಟಗಳು ಗತವನ್ನು ಕುರಿತ ಚರಿತ್ರಕಾರನ ಕಾಣ್ಕೆಯನ್ನು ಬೆಳಗಿದಾಗ ಮಾತ್ರ ಒಳ್ಳೆಯ ಇತಿಹಾಸದ ರಚನೆ ಸಾಧ್ಯವಾಗುತ್ತದೆ. ಇತಿಹಾಸದಿಂದ ಕಲಿಯುವುದು ಎಂದೂ ಏಕಮುಖ ಪ್ರಕ್ರಿಯೆಯಲ್ಲ. ಗತಕಾಲದ ಬೆಳಕಿನಲ್ಲಿ ವರ್ತಮಾನವನ್ನು ತಿಳಿದುಕೊಳ್ಳುವುದು ಎಂದರೆ ವರ್ತಮಾನದ ಬೆಳಕಿನಲ್ಲಿ ಗತಕಾಲವನ್ನು ಅರಿಯುವುದು ಎಂದರ್ಥ. ಗತ ಮತ್ತು ವರ್ತಮಾನಗಳ ನಡುವೆ ಪರಸ್ಪರ ಸಂಬಂಧದ ಮೂಲಕ ಒಂದು ಗಹನವಾದ ಅರಿವನ್ನು ಬೆಳೆಸುವುದು ಚರಿತ್ರೆಯ ಕೆಲಸ[5] **– ಡಿ.ಡಿ.ಕೊಸಾಂಬಿ**

೪. ಭಾರತೀಯ ಸಂಸ್ಕೃತಿಯ ಉಜ್ವಲತೆ ಇರುವುದೇ ಅದರ 'ಭಿನ್ನತೆ'ಗಳ ನಡುವಣ ಘರ್ಷಣೆಯಲ್ಲಿ. ಈ ಘರ್ಷಣೆಗಳು ಒಂದು ನಿರ್ದಿಷ್ಟ ಕ್ರಮದಲ್ಲಿ, ನಿರ್ದಿಷ್ಟ ಚೌಕಟ್ಟಿನಲ್ಲಿ, ನಿರ್ದಿಷ್ಟ ಆಶಯಗಳ ನೆಲೆಯಲ್ಲಿ ನಡೆಯುತ್ತವೆ ಎನ್ನುವುದೇ ಭಾರತೀಯ ಸಂಸ್ಕೃತಿಗೆ ಐಕ್ಯತೆ ನೀಡಿರುವ ಅಂಶ[6] **–ಡಿ.ಆರ್.ನಾಗರಾಜ್**.

೫. ಪ್ರಾಚೀನ ಕಾಲದಿಂದ ಬೆಳೆದು ಬಂದಿರುವ ಕಲಾಪರಂಪರೆಯಲ್ಲಿ ಅಷ್ಟೊಂದು ಬಾಳಿಕೆ ಬಂದಿರುವ ಶಕ್ತಿಮೂಲಗಳೇನು ಎಂದು ಹುಡುಕುವ ಯತ್ನಗಳು ಕಾಲಕಾಲಕ್ಕೆ ನಡೆಯುತ್ತಲೇ ಇರಬೇಕಾಗುತ್ತದೆ. ಸಾಂಸ್ಕೃತಿಕವಾದ ಚಲನಶೀಲತೆಯನ್ನು ಜನರು ಕಾಯ್ದುಕೊಳ್ಳಲಿಕ್ಕೆ ಇಂಥ ಮರು ಸಂದರ್ಶನಗಳು ತುಂಬ ಅವಶ್ಯಕವಾಗಿರುತ್ತವೆ. ಕಾಲದ ಪರಿಣಾಮವಾಗಿ ಕಲೆಗಳ ಸಂಪ್ರದಾಯ, ತಂತ್ರ, ಶೈಲಿ, ಅಭಿವ್ಯಕ್ತಿ ಹಾಗೂ ಪ್ರಯೋಗಗಳ ಪ್ರಯೋಜನದ ದೃಷ್ಟಿಯಲ್ಲಿ ಅನೇಕ ಬದಲಾವಣೆಗಳಾಗುತ್ತಿರುತ್ತವೆ[7]–**ಬಿ.ಎನ್.ಸುಮಿತ್ರಾಬಾಯಿ.**

೬. ಸ್ತ್ರೀವಾದಕ್ಕೆ ಮಡಿವಂತರ, ಸಂಪ್ರಾದಾಯವಾದಿಗಳ ವಿರೋಧ ವ್ಯಾಪಕವಾಗಿಯೇ ಇದೆ. ಅವರು ಸ್ತ್ರೀವಾದವನ್ನು ನಮ್ಮ ಸಂಸ್ಕೃತಿಯನ್ನು ಕೆಡಿಸುವಂಥದ್ದು ಎಂದು ತಪ್ಪು ತಿಳಿದಿದ್ದಾರೆ. ಸಂಸ್ಕೃತಿ ಎಂದರೇನು? ಯಾರದು? ಒಂದು ಸಂಸ್ಕೃತಿಯಿಂದ ಕೆಲವರ್ಗಗಳಿಗೆ ಹಿಂಸೆಯಾಗುತ್ತಿದ್ದರೆ, ಜೀವವಿರೋಧಿ ಮೌಲ್ಯಗಳಿಂದ ಕೂಡಿದ್ದರೆ ಅದನ್ನು ಒಳ್ಳೆಯ ಸಂಸ್ಕೃತಿ ಎನ್ನಲಾದೀತೆ? ಅಥವಾ ಪುರುಷ ಕೇಂದ್ರಿಕೃತ ಸಮಾಜವನ್ನೇ ಇವರು ಸಂಸ್ಕೃತಿ ಎಂದು ಕರೆಯುವುದಲ್ಲದೆ, ಅದನ್ನು ಮುಂದುವರಿಸಲು ಇಚ್ಚಿಸುವರೇ? ಸಂಸ್ಕೃತಿ ಯಾರ ಸೊತ್ತೂ ಅಲ್ಲ. ಯಾರಪ್ಪನ ಆಸ್ತಿಯೂ ಅಲ್ಲ. ಬರ್ಬರತೆ, ಕ್ರೂರತನ, ಬೂರ್ಜ್ವಾತನದಿಂದ ಕೂಡಿದ ನಮ್ಮ ಸಂಸ್ಕೃತಿಯನ್ನು ಶೋಷಣೆಗೆ ಒಳಗಾದ ಜನ ಮುಲಾಜಿಲ್ಲದೆ ತಿರಸ್ಕರಿಸಬೇಕಾಗಿದೆ. ಸಹಗಮನ, ವಿಧವಾ ಸಮಸ್ಯೆ, ಬಾಲ್ಯ ವಿವಾಹ, ಮುಂತಾದ ಅನೇಕ ಅಮಾನವೀಯ ನೆಲೆಗಳು ನಮ್ಮ ಹೆಮ್ಮೆಯ ಭಾರತೀಯ ಸಂಸ್ಕೃತಿಯಲ್ಲಿದೆ. ಈ ನೀಚತನವನ್ನು ಇಂದೂ ಕೂಡ ಸ್ತ್ರೀವಾದಿ ಚಳವಳಿಯನ್ನು ತಿರಸ್ಕರಿಸುವುದರಿಂದ ತೋರಿಸಲಾಗುತ್ತಿದೆ. ನಮ್ಮ ಸಂಸ್ಕೃತಿ ಕೆಡುತ್ತಿದೆಯೆಂದು ಎಷ್ಟೋ ಸಲ ಬೊಬ್ಬೆ ಹೊಡೆದರೂ ಕೂಡ ಸ್ತ್ರೀವಾದಿ ಚಳವಳಿ ಸಂಸ್ಕೃತಿಯನ್ನು ಪ್ರಶ್ನಿಸದೇ ಬಿಡದು, ಮತ್ತು ಬದಲಾವಣೆಗಾಗಿ ಹೋರಾಟ ಮಾಡುವುದನ್ನು ಕೂಡಾ[8] **–ಎಚ್.ಎಸ್.ಮುಕ್ತಾಯಕ್ಕ.**

೭. ಬದಲಾಗುತ್ತಿರುವ ಬದುಕಿನ ಹೊಸಪರಿಕಲ್ಪನೆಗಳು ಮತ್ತು ಪರಿಕರಗಳು ಚರಿತ್ರೆ ಮತ್ತು ಚರಿತ್ರೆಯ ಸಂಭವವಾದ ಕಲೆಯನ್ನು ಕಾಲಕಾಲಕ್ಕೆ ಪರೀಕ್ಷೆಗೆ ಒಳಪಡಿಸುವುದು ಅನಿವಾರ್ಯ. ಇದೇ ಪುನರ್‌ಮೌಲ್ಯೀಕರಣ.
ಪುನರ್‌ಮೌಲ್ಯೀಕರಣವು ಕೇವಲ ಸಾಹಿತ್ಯಕ್ಕೆ ಸಂಬಂಧಿಸಿದ್ದಲ್ಲ ಬದುಕಿಗೂ ಸಂಬಂಧಿಸಿದ್ದು. ಮೊದಲು ಬದುಕಿನಲ್ಲಿ ಸಂಭವಿಸಿ ತನ್ಮೂಲಕ ಸಾಹಿತ್ಯವನ್ನೂ ಸಾಹಿತ್ಯ ವಿಮರ್ಶೆಯನ್ನೂ ಆವರಿಸಿಕೊಳ್ಳುವ ಪುನರ್‌ಮೌಲ್ಯೀಕರಣವು ಹೊಸ ವ್ಯಾಖ್ಯಾನಗಳ ಒಂದು ಪ್ರಕ್ರಿಯೆ;...ಪುನರ್‌ಮೌಲ್ಯೀಕರಣ ಪರಿಕಲ್ಪನೆಯು ನಿರಾಕರಣೆಯ ನೆಲೆಯಿಂದ ಹುಟ್ಟಿದ್ದಲ್ಲ; ಅದು ಕಟ್ಟಕಡೆಯ ತೀರ್ಮಾನವೂ ಅಲ್ಲ. 'ಮೌಲ್ಯೀಕರಣ' ಎಂಬ

DOI: 10.59176
http://www.kristujayantijournal.com/index.php/KJKSP

ಮಾತೇ ನಿರಂತರತೆಯನ್ನು ಸೂಚಿಸುತ್ತದೆ; ನಿಲುಗಡೆಯನ್ನು ಸೂಚಿಸುವುದಿಲ್ಲ. ನಿರಂತರತೆಯೆನ್ನುವುದು ಕಾಲಘಟ್ಟಗಳು ಜಡಗಟ್ಟುವುದನ್ನು ತಪ್ಪಿಸುವ ಒಂದು ತೀವ್ರತೆ. ಇಂಥ ತೀವ್ರತೆಯ ಹಿನ್ನೆಲೆಯಲ್ಲಿ, ಕಾಲಘಟ್ಟವೊಂದು ದೊರಕಿಸಿಕೊಟ್ಟ ಅನುಭವ ಮತ್ತು ಅರಿವಿನ ಬೆಳಕಿನಲ್ಲಿ ನಡೆಸುವ ನಿರ್ದಿಷ್ಟ ಶೋಧವಾಗಿ ಪುನರ್‌ಮೌಲ್ಯೀಕರಣವನ್ನು ಪರಿಗಣಿಸಬೇಕು[9] **–ಬರಗೂರು ರಾಮಚಂದ್ರಪ್ಪ.**

–ಉಲ್ಲೇಖಿತ ವಿಚಾರ–ವ್ಯಾಖ್ಯಾನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಸಾಂಸ್ಕೃತಿಕ ಪುನರ್ಮೌಲ್ಯೀಕರಣವು ಮನುಷ್ಯಜೀವನದ ಎಲ್ಲ ಸ್ತರಗಳಲ್ಲೂ, ಎಲ್ಲ ಕಾಲಗಳಲ್ಲೂ ಅನಿವಾರ್ಯವಾಗಿ ನಡೆದಿರುವಂತಹ ಪ್ರಕ್ರಿಯೆಯಾಗಿದೆ. ಒಂದು ಸ್ತರ ಅಥವಾ ಒಂದು ಕಾಲದಲ್ಲಿ ಮಾತ್ರ ಪುನರ್‌ಮೌಲ್ಯೀಕರಣದ ಅನಿವಾರ್ಯತೆ ಉಂಟಾಗಿಲ್ಲ. ಸಾಂಸ್ಕೃತಿಕ ನಿರಂತರತೆಯಲ್ಲಿ ನೆಲೆಯೂರುತ್ತ ಹೊಸಹೊಸ ಆಶೋತ್ತರಗಳ ಒತ್ತಾಸೆಯಲ್ಲಿ ಪುನರ್‌ಮೌಲ್ಯೀಕರಣ ನಡೆದುಬರುತ್ತದೆ. ಹೊಸ ಆಶೋತ್ತರಗಳಿಗೆ ನಿರ್ದಿಷ್ಟ ಗುರಿ–ಗಮ್ಯತೆ ಲಭ್ಯವಾದಂತೆ ಪುನರ್‌ಮೌಲ್ಯೀಕರಣವು ಅನಿವಾರ್ಯವಾಗುತ್ತದೆ. ಸಂಸ್ಕೃತಿ ಚಿಂತಕರಾದ ಬರಗೂರು ರಾಮಚಂದ್ರಪ್ಪ ಅವರು ಹೇಳುವಂತೆ;"ಒಂದೊಂದು ಕಾಲದಲ್ಲಿ ಒಂದೊಂದು ಪ್ರಧಾನರೂಪವಾಗಿ ಪ್ರಕಟವಾಗುವ ಪ್ರಕ್ರಿಯೆ ಸ್ವಾಭಾವಿಕ. ಪ್ರಧಾನ ರೂಪದೊಳಗಿನ ಭಿನ್ನ ನೆಲೆಗಳು ಬಿಡಿಬಿಡಿಯಾಗಿದ್ದು, ಬರುಬರುತ್ತಾ ಬೆಳವಣಿಗೆ ಹೊಂದಿ ಒಂದಾಗಿ ಹೊರಬರುವ ಚಾರಿತ್ರಿಕ ಸಂದರ್ಭ ಬಂದಾಗ ಕಾಲ ಬದಲಾಗುವ ಆಶಯ ಅಭಿವ್ಯಕ್ತವಾಗುತ್ತದೆ; ಇದು ಬರಹದಲ್ಲೂ ಕಾಣಿಸಿಕೊಳ್ಳುತ್ತದೆ. ಇದರ ಫಲವಾಗಿ ಹಿಂದಿನ ಕಾಲಘಟ್ಟವು ಪುನರ್ ಮೌಲ್ಯೀಕರಣಕ್ಕೆ ಒಳಗಾಗುವುದು ಅನಿವಾರ್ಯವಾಗುತ್ತದೆ. ಪುನರ್ ಮೌಲ್ಯೀಕರಣಕ್ಕೆಂದು ಅದು ಪ್ರಜ್ಞಾಪೂರ್ವಕ ಪ್ರಯತ್ನ ನಡೆಯದೇ ಇದ್ದಾಗಲೂ ಹೊಸ ಬದುಕು ಮತ್ತು ಬರಹಗಳು ಹೊಸಕಾಲವನ್ನು ಕಂಡುಕೊಳ್ಳುವ ಮತ್ತು ಕಟ್ಟಿಕೊಡುವ ಕ್ರಿಯೆಯೇ ಪುನರ್ ಮೌಲ್ಯೀಕರಣದ ಮೊದಲ ಹಾಗೂ ಸಹಜ ಹಂತವಾಗುವುದುಂಟು. ಹಿಂದಿನ ಕಲಾರೂಪಗಳು ಅಪ್ರಸ್ತುತವಾಗುತ್ತ ಹೊಸ ವಸ್ತು ವಿನ್ಯಾಸಗಳು ಪ್ರಧಾನವಾಗುತ್ತ ಹೋದಂತೆ ಹೊಸ ಕಾಲ ಮತ್ತು ಹೊಸ ಮನುಷ್ಯನ ಕಲ್ಪನೆಗಳು ಮುಖಾಮುಖಿಗೆ ಇಳಿದು ಪುನರ್ ಮೌಲ್ಯೀಕರಣ ಪ್ರಕ್ರಿಯೆ ತನಗೆ ತಾನೇ ಪ್ರಾರಂಭವಾಗುತ್ತದೆ. ಆದರೆ ನಿರ್ದಿಷ್ಟ ಕಾಲಘಟ್ಟವನ್ನು ಮುಟ್ಟಿ ಹೊಸ ಆಶಯಗಳ ಹೊಸ ಮನುಷ್ಯನ ಕಲ್ಪನೆ ಗಟ್ಟಿಯಾಗುತ್ತ ಬಂದಂತೆ ಪ್ರಜ್ಞಾಪೂರ್ವಕ ಪುನರ್ ಮೌಲ್ಯೀಕರಣದ ಅಗತ್ಯ ಉಂಟಾಗುತ್ತದೆ."[10]

ಪ್ರಾಚೀನ ಯುಗದಿಂದಲೇ ಸಾಂಸ್ಕೃತಿಕ ಪುನರ್‌ಮೌಲ್ಯೀಕರಣದ ಪ್ರಕ್ರಿಯೆ ನಡೆದಿರುವುದನ್ನು ಸ್ಪಷ್ಟವಾಗಿ ಗುರ್ತಿಸಬಹುದಾಗಿದೆ. ಭಾರತೀಯ ದಾರ್ಶನಿಕ ಸಾಹಿತ್ಯ ಪರಂಪರೆಗಳಲ್ಲಿ 'ವೇದ'ಗಳಿಗೆ ಪೂಜ್ಯನೀಯ ಸ್ಥಾನವಿದೆ.

"ವಿಶ್ವದಲ್ಲೇ ಅತಿ ಪ್ರಾಚೀನವಾದುದು ವೇದವಾಙ್ಮಯ"[11] ಎಂಬ ಮಹತ್ವವನ್ನು ಸಾಧಿಸಿದೆ. ಅಪೌರುಷೇಯ (ದೈವನಿರ್ಮಿತ), ವಿಶಿಷ್ಟಜ್ಞಾನ, ಪವಿತ್ರ ಜ್ಞಾನ ಶ್ರುತಿ, ಸಂಹಿತೆ ಎಂದು ಕರೆಯಲಾಗುವ ವೇದಗಳ ಸಾರವನ್ನು ಸಾರಲು, ಅವುಗಳ ಮೌಲ್ಯವನ್ನು ಪರೀಕ್ಷಿಸಿ ಪುರಸ್ಕರಿಸಲು ನಿರಂತರವಾಗಿ ಪುನರ್‌ಮೌಲ್ಯೀಕರಣದ ಪ್ರಯತ್ನಗಳೂ ನಡೆದಿವೆ. ಇದಕ್ಕೆ ವೇದ ಸಂಹಿತೆಗಳ ನಂತರದಲ್ಲಿ ಅಗಾಧವಾಗಿ ಮೂಡಿಬಂದ ಬ್ರಾಹ್ಮಣಗಳಾದಿಯಾಗಿ ವೇದಾಂತಗಳ ವರೆಗಿನ ಹಲವಾರು ಧರ್ಮ–ಶಾಸ್ತ್ರಗ್ರಂಥಗಳೇ ಸಾಕ್ಷಿ. ವಿದ್ವಾಂಸರಾದ **ಡಾ.ಎಸ್.ಎಸ್.ಅನಂತರಂಗಾಚಾರ್ಯರು** ಗುತಿಸಿರುವಂತೆ, "…. ಅನೇಕ ಸಹಸ್ರಮಾನಗಳ ಕಾಲದಲ್ಲಿ ಅನೇಕ ಪ್ರಕಾರಗಳಲ್ಲಿ ಈ ವಾಙ್ಮಯದ ವಿಕಾಸವಾಯಿತು. ಸಂಹಿತೆಗಳು, ಬ್ರಾಹ್ಮಣಗಳು, ಅರಣ್ಯಕಗಳು ಮತ್ತು ಉಪನಿಷತ್ತುಗಳು ವಿಶಿಷ್ಟವಾದ ಲಕ್ಷಣಗಳನ್ನು ಹೊಂದಿ ಕರ್ಮ ಜ್ಞಾನ ಭಕ್ತಿಗಳನ್ನು ಪ್ರತಿಪಾದಿಸುತ್ತವೆ……ಈ ಪವಿತ್ರವಾದ ವಾಙ್ಮಯದ ರಕ್ಷಣೆಗಾಗಿಯೇ ವೇದಾಂಗಗಳು ಮತ್ತು ಅನುಕ್ರಮಣಿಕೆಗಳು ವಿರಚಿತವಾದವು. ವೇದಗಳಲ್ಲಿ ಬಳಸಿರುವ ಸಂಸ್ಕೃತ ಭಾಷೆಯೇ ಮುಂದೆ ಅನೇಕ ಕಾಲದ ನಂತರ ಮಹತ್ತರವಾದ ಪರಿವರ್ತನೆಗಳನ್ನು ಹೊಂದಿ ಕಾವ್ಯಸಂಸ್ಕೃತವಾಗಿ ಮೂಡಿಬಂದಿತು. ಈ ಕಾವ್ಯಸಂಸ್ಕೃತದಲ್ಲಿ ಇತಿಹಾಸಗಳು, ಪುರಾಣಗಳು, ಮಹಾಕಾವ್ಯಗಳು, ನಾಟಕಗಳು, ಶಾಸ್ತ್ರಗ್ರಂಥಗಳು, ಭಾಷ್ಯಗಳು, ವ್ಯಾಖ್ಯಾನಗಳು ಮೊದಲಾದುವೆಲ್ಲ ಮುಂದಿನ ಕಾಲಗಳಲ್ಲಿ ವಿರಚಿತವಾದವು……….."[12] ಹೀಗೆಯೇ ವೇದಗಳು ಹಾಗೂ ವೇದೋತ್ತರ ಸಾಹಿತ್ಯ ಸಂರಚನೆ ಮತ್ತು ಸಾಂಸ್ಕೃತಿಕ ಪುನರ್‌ಮೌಲ್ಯೀಕರಣ ಪ್ರಕ್ರಿಯೆಗಳನ್ನು ಕುರಿತು ಮತ್ತಷ್ಟು ಸ್ಪಷ್ಟೀಕರಣಕ್ಕಾಗಿ ಇತಿಹಾಸಕಾರರಾದ **ಡಾ.ಎಚ್.ಸಿ.ರಾಯ್‌ಚೌಧುರಿ** ಅವರ ಶೋಧನೆಯೂ ಉಲ್ಲೇಖನೀಯ : "….. ವಿಶೇಷವಾಗಿ ಅನಾದಿ ಕಾಲದಿಂದಲೂ ವಾಕ್ ಮೂಲಕ ಪ್ರವಹಿಸಿಕೊಂಡು ಬಂದಿರುವ ಸಾಹಿತ್ಯವೇ ವೇದ….. (1) ವೇದ ಸಾಹಿತ್ಯದ ಅತ್ಯಂತ ಪುರಾತನ ಭಾಗವೆಂದರೆ ಮಂತ್ರ (ನುಡಿಯುವುದು, ಹಾಡುವುದು, ಸೂತ್ರ); ಇದು ನಾಲ್ಕು ಸಂಹಿತೆಗಳಲ್ಲಿ ಹರಡಿಕೊಂಡಿದೆ. ಋಕ್, ಸಾಮ, ಯಜುರ್ ಮತ್ತು ಅಥರ್ವ ಸಂಹಿತೆಗಳೆಂಬುದೇ ನಾಲ್ಕು ಸಂಹಿತೆಗಳು ಅಥವಾ ಸಂಗ್ರಹಗಳು….. ಋಕ್ ಸಂಹಿತೆಯು (ಋಗ್ವೇದ) ವಿವಿಧ ದೇವರುಗಳನ್ನು ಸ್ತುತಿಸಿರುವ ಗೀತೆಗಳ ಸಂಗ್ರಹ….. ಸಾಮವೇದ ಸಂಹಿತೆ ಅಥವಾ ಮಂತ್ರಗ್ರಂಥವು ಸ್ವತಂತ್ರ ವಿಷಯವನ್ನೇನೂ ಹೊಂದಿರದೆ, ಅವುಗಳಲ್ಲಿ ಎಪ್ಪತ್ತೈದು ಶ್ಲೋಕಗಳನ್ನು ಬಿಟ್ಟು ಮಿಕ್ಕುವೆಲ್ಲವೂ ಋಗ್ವೇದದಿಂದ ನೇರವಾಗಿ ತೆಗೆದುಕೊಂಡಿರುವವು….. ಯಜುರ್ವೇದ ಸಂಹಿತೆ ಅಥವಾ ಯಾಗ ಪ್ರಾರ್ಥನೆಗಳ ಗ್ರಂಥವು ಋಗ್ವೇದಗಳಿಂದ ಆರಿಸಿಕೊಂಡ ಶ್ಲೋಕಗಳನ್ನೇ ಅಲ್ಲದೆ ಸ್ವತಂತ್ರ ಗ್ರಂಥಸೂತ್ರಗಳನ್ನೂ ಹೊಂದಿದ್ದು…… ಈ ಸಂಹಿತೆಗಳ ಯುಗದ ತರುವಾಯ, ಬಹು ಕಾಲದ ಅನಂತರ,

ಅಥರ್ವವೇದ ಅಥವಾ ಮಾಯಾ ಸೂತ್ರಗಳ ಗ್ರಂಥವೆಂಬ ನಾಲ್ಕನೆಯ ವೇದವು ಅಂಗೀಕೃತವಾಯಿತು.....(2) ಎರಡನೆ ವರ್ಗದ ವೇದಗ್ರಂಥಗಳು (ವೇದಗಳನ್ನು ವಿವರಿಸುವ ಗ್ರಂಥಗಳಾಗಿ ಮೂಡಿಬಂದವು–ಸಂಶೋಧಕರು) 'ಬ್ರಾಹ್ಮಣ' ಎಂದು ಕರೆಯಲ್ಪಟ್ಟಿವೆ...... ಇವು ವಿಶೇಷವಾಗಿ ಗದ್ಯರೂಪದಲ್ಲಿದ್ದು ಯಾಜ್ಞೀಯದ ಬಗ್ಗೆ ಅವಲೋಕನೆಗಳನ್ನೊಳಗೊಂಡಿವೆ...... (3) ಇದಾದನಂತರ ಆರಣ್ಯಕಗಳು ಅಥವಾ ವನಗ್ರಂಥಗಳು ಬಂದಿವೆ. ಇವು ಅರಣ್ಯಗಳಲ್ಲಿ ವಾಸಿಸುವ ಸನ್ಯಾಸಿಗಳಿಗಾಗಿ ಬರೆದಿರುವ ಗ್ರಂಥಗಳು. ಇವು ಬ್ರಾಹ್ಮಣಗಳಿಗೆ ಪರಿಶಿಷ್ಟಗಳಾಗಿವೆ. ಈ ಗ್ರಂಥಗಳು ಭಾಷೆ, ಶೈಲಿ ಮತ್ತು ವಸ್ತುವಿನಲ್ಲಿಯೂ ಸಹ ಬ್ರಾಹ್ಮಣ ಗ್ರಂಥಗಳನ್ನೇ ಹೋಲುತ್ತವೆಯಾದರೂ.....ಸಂಸ್ಕಾರಗಳ ರಹಸ್ಯಾರ್ಥಗಳ ಪ್ರಾಮುಖ್ಯ ಮತ್ತು ಸಂಹಿತೆಗಳ ಗೂಡಾರ್ಥಗಳ ಬಗ್ಗೆ ಹೆಚ್ಚಿನ ಗಮನ ನೀಡಿವೆ..... (4)...ಗೂಢ ಅಥವಾ ವಿಶಿಷ್ಟ ತತ್ತ್ವ'ಗಳಾದ ಉಪನಿಷತ್ತುಗಳು.....ಸಮೀಪದಲ್ಲಿ ಕುಳಿತು ಕೇಳುವ ಪುತ್ರನಿಗಾಗಲೀ ಅಥವಾ ನಂಬಿಕೆಯ ಶಿಷ್ಯನಿಗಾಗಲೀ ಉಪದೇಶಿಸುವ ತತ್ತ್ವಗಳಾಗಿವೆ. ಅವು 'ಅರಣ್ಯಕ'ಗಳಲ್ಲಿ ಅಂತರ್ಗತವಾಗಿವೆ ಅಥವಾ ಅವುಗಳು ಪರಿಶಿಷ್ಟಗಳಿಂದಾಗಿವೆ. ಅವುಗಳು ಸ್ವತಂತ್ರ ಕೃತಿಗಳಂತೆಯೂ ಕಂಡು ಬರುತ್ತವೆ..... ಮೇಲೆ ಹೆಸರಿಸಿರುವ ಸಾಹಿತ್ಯ ಕೃತಿಗಳ ವರ್ಗಗಳನ್ನು ಮಾತ್ರ 'ಶ್ರುತಿ' ಅಥವಾ 'ಪ್ರಸಾರಗೊಂಡ ಜ್ಞಾನ' ಎನ್ನಬಹುದು ಮತ್ತು ವೇದಸಾಹಿತ್ಯವನ್ನು ಇದು ಸರಿಯಾಗಿಸುತ್ತದೆ. ಇದಕ್ಕೇ ನಿಕಟವಾಗಿ ಸಂಬಂಧಿಸಿದಂತಹ ಆದರೆ ಈ ಶ್ರುತಿಗಳ ಒಂದು ಭಾಗ ಎಂದು ಪರಿಗಣಿಸದ ವೇದಾಂಗಗಳು (ವೇದಗಳ ಅಂಗಗಳು) ಎಂಬ ಸಹಾಯಕ ಗ್ರಂಥಗಳು ಇವೆ. ಇವುಗಳನ್ನು ಶ್ರುತಿಗಳಷ್ಟು ಅಧಿಕೃತವಲ್ಲವೆಂದು ಪರಿಗಣಿಸಿ 'ಸ್ಮೃತಿ'ಯೆಂಬುದಾಗಿ ಕರೆದಿರುವರು...... ಸ್ಮೃತಿ ಎಂದರೆ ಯಾವ ಪ್ರಾಚೀನ ಋಷಿಗಳಿಗೆ 'ವೇದಗಳು' ತೋಚಿದವೋ ಆ ಋಷಿಗಳಿಂದ ನಿಷ್ಪನ್ನವಾದ ಸಂಪ್ರದಾಯವನ್ನು ಮುಂದಿನ ಪೀಳಿಗೆಗಳಿಗೆ ನೀಡುವುದು ಎಂದಾಗುತ್ತದೆ......ಅವು ಸೂತ್ರಗಳು(ಆಲೋಚನಾ ಸರಣಿ, ಮಾರ್ಗದರ್ಶಿ, ನಿಯಮ, ಸೂಕ್ತಿ) ಎಂಬ ಹೆಸರಿನಿಂದ ಪ್ರಸಿದ್ಧವಾಗಿವೆ. ಹಲವು ಸಿದ್ಧಾಂತಗಳನ್ನು ಆನಂತರದ ದಿನಗಳಲ್ಲಿ ಪದ್ಯರೂಪವಾಗಿ ಪರಿವರ್ತಿಸಲಾಯಿತು..... ವೇದಾಂತಗಳ ಸಂಖ್ಯೆ ಆರು; ಶಿಕ್ಷಾ (ಧ್ವನಿಶಾಸ್ತ್ರ), ಕಲ್ಪ (ಸಂಸ್ಕಾರ ಶಾಸ್ತ್ರ), ವ್ಯಾಕರಣ, ನಿರುಕ್ತ (ವ್ಯುತ್ಪತ್ತಿಶಾಸ್ತ್ರ), ಛಂದಸ್ಸು ಮತ್ತು ಜ್ಯೋತಿಷ್ಯ.....ಈ ವಿಷಯಗಳ ಬಗ್ಗೆ ಈಗಾಗಲೇ ಹಲವು ಉಪನಿಷತ್ತುಗಳಲ್ಲಿ ಹೇಳಲಾಗಿದೆ....."[13] ಹೀಗೆಯೇ ಭಾರತದ ಯಾವುದೇ ದಾರ್ಶನಿಕ ಪರಂಪರೆಯ ಸಾಹಿತ್ಯದ ವಿಕಾಸವನ್ನು ಅವಲೋಕಿಸಿದರೂ, ವಾಕ್‌ಮೂಲದ (ಜಾನಪದ ಮೂಲದ) ಸಂವೇದನೆಗಳ ಅಭಿವ್ಯಕ್ತಿಯು ಪಠ್ಯಗಳಾಗಿ, ಆ ಪಠ್ಯಗಳು ಮತ್ತೆ ಮತ್ತೆ ಪುನರ್‌ಮೌಲ್ಯೀಕರಣಕ್ಕೇ, ಪುನರ್‌ನಿರೂಪಣೆಗೆ ಒಳಗಾಗಿರುವುದನ್ನು ಗುರ್ತಿಸಬಹುದಾಗಿದೆ. ದಾರ್ಶನಿಕ ಮಹಾಶಯರಾದ ಬುದ್ಧರ ಬೋಧನೆಗಳಾಗಲೀ, ಮಹಾವೀರರ ಬೋಧನೆಗಳಾಗಲೀ, ಕನ್ನಡ ನೆಲದ ಬಸವಾದಿ ಶರಣರ ವಚನಗಳಾಗಲೀ

DOI: 10.59176
http://www.kristujayantijournal.com/index.php/KJKSP

ಮೊದಲು ವಾಕ್‌ಪರಂಪರೆಯಿಂದ ಸಾಗಿ ಬಂದು, ನಂತರದಲ್ಲಿ ತತ್ವದರ್ಶನಗಳ ಸಾರಸಂಗ್ರಹಿಸಿ ಸಾರಲು ಪಠ್ಯಗಳಾಗಿ ರೂಪಿಸಲಾಯಿತು. ತದನಂತರದ ಕಾಲಮಾನಗಳಲ್ಲಿ ಆ ಪಠ್ಯಗಳು ಪೂಜ್ಯನೀಯ ಸ್ಥಾನ ಪಡೆದೂ ಪರಿಷ್ಕರಣಕ್ಕೇ, ಪರಿಶೀಲನೆಗೆ, ಪುನರ್‌ಮೌಲ್ಯೀಕರಣಕ್ಕೇ ಹಾಗೂ ಪುನರ್‌ನಿರೂಪಣೆಗೆ ಒಳಗಾಗಿ ಸುಕೃತಿಯೋ ವಿಕೃತಿಯೋ ಆಗಿ ವಿಕಾಸಗೊಂಡಿರುವುದು ಸಾಂಸ್ಕೃತಿಕ ಸಂಚಲನೆಗೆ ದ್ಯೋತಕವಾಗಿದೆ.

ಕನ್ನಡ ಸೃಜನಶೀಲ ಬರಹಗಾರರು ಕಾಲಾನುಕಾಲದಿಂದಲೂ ತಮ್ಮ ಅಧ್ಯಯನ ಹಾಗೂ ಅರಿವುಗಳ ಮೂಲಕ 'ಕನ್ನಡದೊಳ್ ಭಾವಿಸಿದ ಜನಪದ'ವನ್ನು ನಿರಂತರವಾಗಿ ಅನುಸಂಧಾನಿಸಿದರು. ಪಾರಂಪರಿಕ ಮೌಲ್ಯಗಳನ್ನು ಪುನರ್ ಮೌಲ್ಯೀಕರಿಸಿದರು; ಕಾಲಕ್ಕೆ ತಕ್ಕಂತೆ ಪರಿಷ್ಕರಿಸಿ ಪುರಸ್ಕರಿಸಿದರು. ಹೀಗಾಗಿಯೇ ಪ್ರಾಚೀನ ಕಾಲದಿಂದಲೂ ಈ ಕಾಲದವರೆಗೂ ಕನ್ನಡ ಸಾಹಿತ್ಯಯಾನದ ಧಾರ್ಮಿಕ ಹಿನ್ನೆಲೆ, ಸಾಮಾಜಿಕ ಹಿನ್ನೆಲೆ, ರಾಜಕೀಯ ಹಿನ್ನೆಲೆ, ಆರ್ಥಿಕ ಹಿನ್ನೆಲೆ ಹಾಗೂ ರಾಚನಿಕ ಹಿನ್ನೆಲೆಗಳಲ್ಲಿ ಭಿನ್ನತೆ, ವೈವಿಧ್ಯತೆ ಕಂಡು ಬರುತ್ತದೆ. ಪ್ರತೀ ಲೇಖಕರೂ ತಮ್ಮ ಹಿಂದಿನವರ ಸಾಹಿತ್ಯ–ಸಾಂಸ್ಕೃತಿಕ ಪ್ರಜ್ಞೆಯನ್ನು ಕುರುಡುಕುರುಡಾಗಿ ಹಿಂಬಾಲಿಸಿದೆ, ತಾವಿರುವ ಕಾಲ–ದೇಶ–ಕ್ರಿಯೆಗಳ ಪ್ರಾಮಾಣ್ಯಕ್ಕೆ ತಕ್ಕಂತೆ ಮೌಲ್ಯೀಕರಿಸಿ ತಮ್ಮದೇ ಆದ ರಚನಾ ಸಂವೇದನಾ ಮಾರ್ಗವನ್ನು ಕಂಡುಕೊಂಡಿದ್ದಾರೆ. ಯಾವುದೇ ನೆಲದ ಯಾವುದೇ ಜನಸಮುದಾಯದ ಸಾಂಸ್ಕೃತಿಕ ಚರಿತ್ರೆಯ ಮೇಲೆ ಕಣ್ಣಾಡಿಸಿದರೂ, ಅಲ್ಲೆಲ್ಲ ಕಂಡು ಬರುವ 'ಚಲನಶೀಲತೆ', ಗತಿಶೀಲತೆ'ಗೆ ಈ ಬಗೆಯ ಸಾಂಸ್ಕೃತಿಕ ಮುಖಾಮುಖಿಯೇ ಕಾರಣವಾಗಿದೆ. ಕನ್ನಡ ಸೃಜನ ಪರಂಪರೆ ಕಂಡುಕೊಂಡ ಅಭಿವ್ಯಕ್ತಿ ಕ್ರಮದ ವೈವಿಧ್ಯತೆ, ಸಂವೇದನೆಯ ವೈಶಾಲ್ಯತೆ, ವಸ್ತು ಆಯ್ಕೆ – ಅನುಸಂಧಾನದ ವಿಶಿಷ್ಟತೆ ಮೊದಲಾದವು ಕನ್ನಡದ ಸಾಂಸ್ಕೃತಿಕ ಪುನರ್‌ಮೌಲ್ಯೀಕರಣ ಪ್ರಕ್ರಿಯೆಗೆ ಸಾಕ್ಷಿಯಾಗಿವೆ.

## ಕೊನೆಟಿಪ್ಪಣಿಗಳು:

೧. ಉದ್ಧೃತ: ಸಂಸ್ಕೃತಿ ವಿಕಾಸ; ನಂ.ತಪಸ್ವೀಕುಮಾರ್; ಚೇತನ ಬುಕ್ ಹೌಸ್, ಮೈಸೂರು; 2000; ಪುಟ 22.
೨. ಡಿ.ವಿ.ಜಿ; ಸಂಸ್ಕೃತಿ; ಕಾವ್ಯಾಲಯ ಪ್ರಕಾಶನ, ಮೈಸೂರು; 1985 (ನಾಲ್ಕನೇ ಮುದ್ರಣ); ಪುಟ 14.
೩. ಜಾತಿವ್ಯವಸ್ಥೆ–ಉಗಮ,ವಿಕಾಸ,ವಿನಾಶ; ಮೂಲ: ಡಾ. ಬಿ.ಆರ್. ಅಂಬೇಡ್ಕರ್; ಅನುವಾದ–ರಾಹು; ಸುಮೇಧ ಪ್ರಕಾಶನ, ಗುಲಬರ್ಗಾ; 2010; ಪುಟ 21.
೪. ಭಾರತ ದರ್ಶನ; ಮೂಲ: ಜವಾಹರಲಾಲ್ ನೆಹರೂ; ಅನುವಾದ: ಎಸ್.ವಿ. ಕೃಷ್ಣಮೂರ್ತಿರಾವ್; ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಬೆಂಗಳೂರು; 2007; ಪುಟ 376.

೫. ಡಿ.ಡಿ.ಕೊಸಾಂಬಿ(ಮೂಲ); ಅನುವಾದ–ವೇಣುಗೋಪಾಲ್.ಟಿ.ಎಸ್., ಶೈಲಜಾ; ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರಿಕತೆ – ಚಾರಿತ್ರಿಕ ರೂಪುರೇಷೆ; ಚಿಂತನ ಪುಸ್ತಕ, ಬೆಂಗಳೂರು; 2011; ಪುಟ 49 50.

೬. ಡಿ.ಆರ್.ನಾಗರಾಜ್; ಸಾಹಿತ್ಯ ಕಥನ; ಅಕ್ಷರ ಪ್ರಕಾಶನ, ಹೆಗ್ಗೋಡು–ಸಾಗರ, ಶಿವಮೊಗ್ಗ; ಪುಟ 201.

೭. ಬಿ.ಎನ್.ಸುಮಿತ್ರಾಬಾಯಿ; ಸ್ತ್ರೀದರ್ಪಣದಲ್ಲಿ ನಾಟ್ಯಶಾಸ್ತ್ರ; ಅಹರ್ನಿಶಿ ಪ್ರಕಾಶನ, ಶಿವಮೊಗ್ಗ; 2015; ಪುಟ 18.

೮. ಎಚ್.ಎಸ್.ಮುಕ್ತಾಯಕ್ಕ; ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು; 1997; ಪ್ರಸ್ತಾವನೆ ಪುಟ: ಫಿ.

೯. ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ; ವಿವಿಧ ಲೇಖಕರು; ಪ್ರಧಾನ ಸಂಪಾದಕರು–ಬರಗೂರು ರಾಮಚಂದ್ರಪ್ಪ; ಕನ್ನಡ ಸಾಹಿತ್ಯ ಪುನರ್‌ಮೌಲ್ಯೀಕರಣ ಮಾಲೆ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು; ಪ್ರಥಮ ಮುದ್ರಣ–1993, ದ್ವಿತೀಯ ಮುದ್ರಣ–2006; ಬರಗೂರು ರಾಮಚಂದ್ರಪ್ಪ ಅವರ ಪ್ರಸ್ತಾವನೆ; ಪುಟ 10–11.

೧೦. ಅದೇ; ಪುಟ 13.

೧೧. ಡಾ.ಎನ್.ಎಸ್.ಅನಂತರಂಗಾಚಾರ್ಯ; ವೈದಿಕ ಸಾಹಿತ್ಯ ಚರಿತ್ರೆ; ಡಿ.ವಿ.ಕೆ. ಮೂರ್ತಿ ಪ್ರಕಾಶನ; ಮೈಸೂರು, ಪ್ರಥಮ ಮುದ್ರಣ–1968; ತೃತೀಯ ಮುದ್ರಣ – 2001; ಪೀಠಿಕೆ ಪುಟ 5.

೧೨. ಅದೇ ; ಪುಟ 426.

೧೩. ಭಾರತದ ಪ್ರೌಢ ಇತಿಹಾಸ, ಮೂಲ : ಆರ್.ಸಿ.ಮಜುಮ್‌ದಾರ್, ಎಚ್.ಸಿ.ರಾಯ್‌ಚೌಧುರಿ, ಕಾಲೀಕಿಂಕರದತ್ತ; ಅನುವಾದ–ಎನ್.ಎಸ್.ಶಾರದಾಪ್ರಸಾದ್; ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿವಿ, ಮೈಸೂರು; ಮೂರನೇ ಮುದ್ರಣ–2012; ಪುಟ 39–40.